Regd No B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

ಸ್ವಾಮಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ಏ ಸುಬ್ಬರಾಯರು [2 ನಪ್ಕೆ

1—9—1964

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನಪ್ಕೆ

Protect the Cow
ಗೋಸಂರಕ್ಷಣೆ ಮಾಡಿ

ಕೇಂದ್ರದ ಸಹಾಯ

ಬೆಂಗಳೂರಿನಿಂದ ಬಂದ ವಾರ್ತೆ ಪ್ರಕಾರ ಕಳೆದ ವಾರ ಸ್ಥಾಪಿತವಾದ ವ್ಯವಸಾಯ ಕಾಲೇಜಿಗೆ ಭಾರತ ಸರ್ಕಾರ ರೂ 4 ಲಕ್ಷ ಕೊಟ್ಟಿದೆ.

ಬ್ರಿಟನ್‌ಗೆ ಆತಂಕ

ಇಂಡೋನೇಷಿಯಾಕ್ಕೆ ಆಹಾರ ಸಾಮಗ್ರಿಗಳನ್ನು ಕೊಡುವದು ಬ್ರಿಟನ್ನಿಗೆ ಆತಂಕವನ್ನುಂಟು ಮಾಡಿದೆ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷರ ನಿಶ್ಯಕ್ತಿಗೆ ಖಾತ್ರಿಯಾದ ಯುವ್ವಸದಲ್ಲಿಯೇ ಮುಪ್ಪಾದಂತೆ ಭಾವಿಸುವವರು ಮತ್ತು ಸಂಸಾರದಲ್ಲಿ ಜಿಗಪ್ಸೆ ಹೊಂದಿದವರು ಇಂದೇ ಡಾ || ಮೋತಿಯುವಂ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಋತುಸಾಸ್ರಾವ ತೊಂದರೆ ಮತ್ತು ಇದೇ ರೀತಿಯ ಸಲಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ

ಸಲಹೆ ಕಾಲ { ಬೆಳಿಗ್ಗೆ 10 ರಿಂದ 1
ಪ್ರತಿ ದಿನವೂ { ಸಂಜೆ 4 ರಿಂದ 8

ಹೆಡ್ ಆಫೀಸ್ :
ಸುಬೇದಾರ್ ಛತ್ರಂ ರೋಡ್
ಬೆಂಗಳೂರು 9. ಫೋಕ ಸಂಖ್ಯೆ 75332

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಪಂಸಜ್ಯಕೃಷ್ಣ ಜೋಯಿಸರವರಿಂದ

ಶ್ರೀ2 ಬುಧವಾರ ಏಕಾದಶಿ ಪುನರ್ವಸುಶ್ರೀ

ಪೌರಸಭೆ ವಾರ್ತೆ

ಶ್ರೀಮತಿ ಸೌಂದರಮ್ಮ ವೆಂಕಟೇಶ್ವರಂ ಅಧ್ಯಕ್ಷತೆಯಲ್ಲಿ ಈ ದಿನ ಮೈಸೂರು ಪೌರಸಭೆಯ ಸಾಧಾರಣ ಸಭೆ ಸೇರಿದ್ದಿತು.

ಶ್ರೀ ಎಂ ಎನ್. ತಿಮ್ಮಯ್ಯನವರು ಮಾತನಾಡುತ್ತಾ, ಕಟ್ಟಡದ ತೆರಿಗೆಯ ಬಗ್ಗೆ ಆರ್ಜಿಯನ್ನು ಈ ತಿಂಗಳು ಕಡೆಯೊಳಗೆ ಕವರ್ನಿಮೆಂಟ್ ಅಫೀಸರ್‌ವರಿಗೆ ತಲುಪಿಸಬೇಕು ಕಟ್ಟಡದ ತೆರಿಗೆ ಭಯಂಕರವಾದ ತೆರಿಗೆ ರಾಜ್ಯದ ಎಲ್ಲ ಪೌರಸಭೆಗಳು ಆ ತೆರಿಗೆಯನ್ನು ವಿರೋಧಿಸಿವೆ ಈ ತೆರಿಗೆ ವಸೂಲ್ಮಾಡುವುದನ್ನು ಸರ್ಕಾರ ಕೈಬಿಡಬೇಕು ಎಂದರು.

ಡಾ|| ಬಿ ಜಿ ದಾಸರು ಮಾತನಾಡುತ್ತಾ, ನಗರದಲ್ಲಿ ಗೋವಧೆ ಹೆಚ್ಚಾಗಿದೆ 8 ನೂರು ಸಾವಿರ ರೂಪಾಯಿಗಳ ಬೆಲೆಬಾಳುವ ಹಸುಗಳು ನಾಪತ್ತೆ ಆಗುತ್ತಿವೆ ಕಾಮಧೇನು ಮಹಾಪವಿತ್ರವಾದುದು ಅದರ ಕೊಲೆ ಆಗುತ್ತಿರುವ ದೆಸೆಯಿಂದಲೇ ಅತಿ ವೃಷ್ಟಿ ಹಾಗೂ ಅನಾವೃಷ್ಟಿಗಳು ಆಗುತ್ತಿವೆ. ಗೋವಧೆ ನಿರೋಧಿಸಿ ಡಾಕ್ಟರೊರ್ವರು ಉಪವಾಸ ಹೂಡಬೇಕೆಂದು ಇದ್ದುದು ತಮಗೆ ತಿಳಿದಿದೆ ಗೋವಧೆ ನಿಲಿಸಲು ಕಾನೂನು ಕೈಗೊಳ್ಳಬೇಕು ಎಂದರು.

ಆಹಾರ ವಿಚಾರ ಕುರಿತು ಅವರು ಮಾತನಾಡುತ್ತಾ, ಅಂಗಡಿಗಳಲ್ಲಿ ಮೈದ ಹಾಗೂ ಗೋಧಿ ಸಿಕ್ಕುತ್ತಿಲ್ಲ ಬ್ರೆಡ್ ಸಿಗುವುದೇ ಕಷ್ಟವಾಗಿದೆ ಅಕ್ಕಿ ಸಿಗುವುದು ಸಹಾ ಕಷ್ಟವಾಗುವುದೇನೊ ಎನಿಸಿದೆ ಸಕ್ಕರೆ ಕೇಳಿದರೆ ಕಾರ್ಡ್ ಬರಲಿ ಕೊಡುತ್ತೇವೆ ಎನ್ನುತ್ತಾರೆ ಆಹಾರಕ್ಕೆ ಉಂಟಾಗಿರುವ ಈ ತೊಂದರೆ ನಿವಾರಣೆ ಮಾಡದಿದ್ದರೆ ಜನರಿಗೆ ಶುಂಬಾ ತೊಂದರೆ ಆಗುವುದು ಎಂದು ನುಡಿದರು

★

ಅಸ್ವಾಭಿಕವಾದ ರೀತಿಯಲ್ಲಿ ತೆರಿಗೆ ವೇಂದ್ರಂನಲ್ಲಿ ಬೆಕ್ಕುಗಳು ಸಾಯುತ್ತಿವೆ

ನೀತಿ

ಬಿಲಾಸಪುರ ಜಿಲ್ಲೆಯ ಸಕ್ರೇಲಿ ಗ್ರಾಮದಲ್ಲಿ ಕೆಲವು ದಿನಗಳ ಹಿಂದೆ ರೊನ್ನ ಮಾನಕುವಾರ್ ಎಂಬ ಸ್ತ್ರೀಯು ತನ್ನ ಗಂಡನ ಚಿತೆಯು ಮೇಲೆ ಕಳಿಶ ಸತಿ ಆಚರಿಸಿದಳು. ಅಗಿನಿಂದ ದಿನವೂ ಆ ಸ್ಥಳಕ್ಕೆ ನೂರಾರು ಜನ ಭೇಟಿ ಕೊಟ್ಟು ಆವಳು ಸತಿ ಆಚರಿಸಿದ ಸ್ಥಳದಲ್ಲಿದ ಮಣ್ಣನ್ನು ಹಣಬ್ಬಿನ ನಡುವೆಗೆ ಹಚ್ಚಿಕೊಂಡು ಹೋಗುತ್ತಲಿದ್ದಾರೆ ಗ್ರಾಮದಲ್ಲಿ ಒಂದು ಸತಿ ಸ್ಮಾರಕ ಸಮಿತಿ ಸ್ಥಾಪನೆ ಆಗಿದೆ ಈ ಘಟನೆಯ ಸ್ಮರಣೆಗಾಗಿ ಹತ್ತಿರ ಇರುವ ಕೆರೆ ದಡದಲ್ಲಿ ಒಂದು ಘಟ್ಟ ಕಟ್ಟಿ ಅದಕ್ಕೆ ಸತಿ ಕಾಂಡವೆಂದು ನಾಮಾಂಕಿತ ಮಾಡಲು ನಿರ್ಧರಿಸಿದ್ದಾರೆ

ಅಶ್ರುವಾಯು ಪ್ರಯೋಗ

ಡಾಕ್ಕಾದಿಂದ ಬಂದಿರುವ ವರದಿಯ ಪ್ರಕಾರ ಚಟಗಾಂಗಿನಲ್ಲಿ ಅಧ್ಯಕ್ಷ ಅಯೂಬರು ಹೊಸ ವಿಶ್ವವಿದ್ಯಾನಿಲಯದ ಶಂಕುಸ್ಥಾಪನೆ ಮಾಡಿದ ಸಂದರ್ಭದಲ್ಲಿ ಪೂರ್ವ ಪಾಕಿಸ್ತಾನದಲ್ಲಿ ವಿದ್ಯಾರ್ಥಿಗಳಿಂದ ಹಿಂಸಾತ್ಮಕ ಗಲಭೆ ನಡೆಯುತ್ತಿರುವಾಗ ಗಲಭೆಕೋರರನ್ನು ಚದುರಿಸಲು ಪೋಲೀಸರು ಅಶ್ರುವಾಯು ಪ್ರಯೋಗಿಸಿದರು

×ಕಾಂಗ್ರೆಸಿನ ಸೇವೆಗಾಗಿ ಅಧಿಕಾರ ಬಿಟ್ಟುಬರುವಂತೆ ಕಾಂಗ್ರೆಸಿನ ಅಧ್ಯಕ್ಷರಿಂದ ಯಾವಾಗ ಕರೆ ಬಂದರೂ ತಾವು ಅಧಿಕಾರ ಬಿಟ್ಟು ಬರುವದಾಗಿ ಭಾರತ ಸರ್ಕಾರದ ಮಂತ್ರಿ ಶ್ರೀ ಮಹಾವೀರ ತ್ಯಾಗಿ ನವದೆಹಲಿಯಲ್ಲಿ ತಿಳಿಸಿದರು

❋

ಭಂಗಾರದನಿಯಂತ್ರಣ ಆಜ್ಞೆಯಿಂದ ನಿರುದ್ಯೋಗಿಗಳಾದ ಚಿನ್ನದ ಕೆಲಸಗಾರರಿಗಾಗಿ ಕೇರಳದ ಪ್ರತಿ ಜಿಲ್ಲೆಯಲ್ಲಿಯೂ ಒಂದೊಂದು ಸೊಸೈಟಿ ಸ್ಥಾಪಿಸಿದೆ ಸೊಸೈಟಿ ಸದಸ್ಯರ ಸಂಖ್ಯೆ 500

ವಿದ್ಯುಚ್ಛಕ್ತಿಯ ಅಭಿವೃದ್ಧಿಗಾಗಿ ಆಂಧ್ರ ಸರ್ಕಾರ 90 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡುವದು

ಘರ್ಷಣೆ

ಪೂರಿಯಲ್ಲಿ ಇಪ್ಪತ್ತು ಸೋಷಲಿಸ್ಟರ ವಿಚಾರಣೆ ನೋಡಲು ಜಿಲ್ಲಾ ಕೋರ್ಟಿನ ಸ್ಪೆಷಲ್ ಕೋರ್ಟಿನಲ್ಲಿ ಜನ ಸೇರಿದ್ದರು ಅಂಡರ್ ಟ್ರೈಯಲ್‌ಗಳನ್ನು ವ್ಯಾನಿನಲ್ಲಿ ಜೇಲಿಗೆ ಕರೆದುಕೊಂಡು ಹೋದಾಗ ಕೆಲವರು ಇಟ್ಟಿಗೆ ಚೂರುಗಳನ್ನು ಎಸೆಯಲು ನಾಲ್ವರು ಪೋಲೀಸರು ಗಾಯಗೊಂಡರು ಪೋಲೀಸರಿಗೂ ಗುಂಪಿನವರಿಗೂ ಆದ ಘರ್ಷಣೆಯಲ್ಲಿ 9 ಜನರಿಗೆ ಗಾಯವಾದವು ನಾಲ್ವರನ್ನು ಆಸ್ಪತ್ರೆಗೆ ಸೇರಿಸಿದೆ.

★

ಕಾರಿನ ಅಪಘಾತ

ಕುಂಭಕೋಣಂದಿಂದ ಕೊಯಮತ್ತೂರಿಗೆ ತನ್ನ ಹೆಂಡತಿ ಮಗನೊಂದಿಗೆ ಚಿತ್ರನಟ ಸಾರಂಗಪಾಣಿ ಹೋಗುತ್ತಿದ್ದಾಗ ಅವರ ಕಾರು ಲಾರಿಯೊಂದಕ್ಕೆ ಡಿಕ್ಕಿ ಬಡಿದು ಸ್ವಲ್ಪ ಗಾಯವಾದ ವಾರ್ತೆ ತಿರುಚಿಯಿಂದ ಬಂದಿದೆ ಅವರಿಗೆಲ್ಲ ಚಿಕಿತ್ಸೆ ಮಾಡಲಾಯಿತು

❋

ವಾರ್ತಾ ವಿಶೇಷಗಳು

ಭಾರತದಲ್ಲಿ ಶೇಕಡ 76 ರಷ್ಟು ಅನಕ್ಷರಸ್ಥರಿದ್ದಾರೆ

★

ಗಂಗಾಜಲದಲ್ಲಿ ಮೊನ್ನೆ ಭೂಮಿ ಅದುರಿತು

★

ಬೊಂಬಾಯಿನಲ್ಲಿ ಮೊನ್ನೆ ನಾಲ್ಕು ಅಂತಸ್ತಿನ ಮನೆ ಕುಸಿದು 9 ವರ್ಷದ ಬಾಲಕನು ಸೇರಿ ಈರ್ವರು ಮರಣಹೊಂದಿದರು.

★

ಕಾಶ್ಮೀರದ ಕದನ ವಿರಾಮ ಗೆರೆಯನ್ನು ಪಾಕಿಸ್ತಾನ ಮತ್ತೆರಡು ಬಾರಿ ಭಂಗಪಡಿಸಿದೆ

★

ವಿಶ್ವ ಸಾಸುವೆ ಎಣ್ಣೆ ಬಂಗಾಳದಲ್ಲಿ ಹೆಚ್ಚಿದೆ

ರಾಷ್ಟ್ರ ಭಾಷೆ

ಸಂಸ್ಕೃತದ ಭಾಷಾ ಎಂಬ ಶಬ್ದವೇ ತದ್ಭವವಾಗಿ ಭಾಷೆಯಾಗಿದೆ. ಭಾಷೆ ' ಎಂದರೆ ಜನಗಳು ಆಡಳಿತಕ್ಕೆ ಮಾತು ಎಂದರ್ಥವಾಗಿದೆ. ಪ್ರಪಂಚದ ವಿವಿಧ ಭಾಗಗಳಲ್ಲಿ ಜನಗಳು ವಿವಿಧ ಭಾಷೆಗಳನ್ನಾಡುತ್ತಾರೆ : ಒಂದು ರಾಷ್ಟ್ರ ದಲ್ಲಿ ಒಂದೇ ಭಾಷೆ ಮಾತಾಡುವುದೂ ಉಂಟು : ಅನೇಕ ಭಾಷೆಗಳೂ ಉಂಟು.

ಭರತಖಂಡದಲ್ಲಿ ಅರ್ವಾಚೀನವಾಗಿ ಇದ್ದ ಭಾಷೆ ಒಂದೇ ; ಅದು ಸಂಸ್ಕೃತ ಭಾಷೆ ; ಕಾಲಕ್ರಮೇಣ ಅದರಿಂದ ಕೆಲವು ಭಾಷೆಗಳು ಉತ್ಪನ್ನವಾದುವು : ಅದ ರಲ್ಲಿ ಈಗಿನ ದ್ರಾವಿಡ ಭಾಷೆಗಳ ತಾಯಿ ಭಾಷೆಯೂ ಒಂದು : ಆ ತಾಯಿಭಾಷೆ ಯಿಂದ ಪಂಚದ್ರಾವಿಡ ಭಾಷೆಗಳು ಉಂಟಾದವು ; ಸಂಸ್ಕೃತದಿಂದಲೇ ಪಂಜಾಬಿ ಸಿಂಧಿ, ಗುಜರಾತಿ, ಮರಾಠಿ, ಹಿಂದಿ, ಬಂಗಾಳಿ, ಅಸ್ಸಾಮಿ ಮುಂತಾದ ಭಾಷೆಗ ಳು ಉತ್ಪನ್ನವಾದುವು : ಇವು ಸಂಸ್ಕೃತಕ್ಕಿಂತ ಬೇರೆ ಭಾಷೆಯಾಗಿದ್ದರೂ, ಈ ಎಲ್ಲಾ ಭಾಷೆಗಳಲ್ಲಿಯೂ (ಪಂಚ ದ್ರಾವಿಡ ಭಾಷೆಗಳೂ ಸೇರಿ) ಬಹುತೇಕ ಪದಗಳು ಶುದ್ಧ ಸಂಸ್ಕೃತ ಅಥವಾ ಅದರ ತದ್ಭವವಾಗಿದೆ : ಇನ್ನು ಕೆಲವಕ್ಕೆ, ಸಂಸ್ಕೃತಕ್ಕೆ ಬಳಸುವ ದೇವನಾಗರಿ ಲಿಪಿಯನ್ನೇ ಬಳಸುತ್ತಿದ್ದಾರೆ.

ಈಗ್ಗೆ ಒಂದು ಶತಮಾನದ ಹಿಂದೆ ಪ್ರತಿಯೊಬ್ಬರೂ ಪ್ರಾಂತಭಾಷೆಯನ್ನು ಕಲಿತನಂತರ ಸಂಸ್ಕೃತ ಭಾಷೆಯನ್ನೂ ಕಲಿಯುತ್ತಿದ್ದರು : ಎಲ್ಲಿಯವರೆಗೆ ಈ ರೀತಿ ನಡೆಯುತ್ತಿತ್ತೋ ಅಲ್ಲಿಯವರೆಗೆ ಪ್ರತಿಯೊಬ್ಬ ಹಿಂದೂವಿನಲ್ಲಿಯೂ ಧಾರ್ಮಿಕ ವಿಚಾರಗಳು ಕುಂದಿರಲಿಲ್ಲ : ಯಾವ ಕಾರಣಕ್ಕಾಗಿಯೂ ಅವನು ಧರ್ಮದಿಂದ ವಿಚಲಿತನಾಗುತ್ತಿರಲಿಲ್ಲ.

ಜ್ಯೋತಿಷ, ಗಣಿತ, ಶಿಲ್ಪ, ಆಯುರ್ವೇದ, ರಸಾಯನಿಕಶಾಸ್ತ್ರ, ಭೌತಿಕ ಶಾಸ್ತ್ರ ಮುಂತಾದ ಯಾವ ಶಾಸ್ತ್ರಗಳನ್ನು ಅಧ್ಯಯನ ಮಾಡಿದರೂ, ಭಗವಂತನಿಗೆ ಎಲ್ಲರೂ ಅಡಿಯಾಳು ಎಂಬುದನ್ನು ತಿಳಿದಿರುತ್ತಿದ್ದನು. ಈ ಕಾರಣದಿಂದಲೇ ಮುಸಲ್ಮಾನರ ಆಡಳಿತ ಕಾಲದಲ್ಲಿ ನಾನಾ ಹಿಂಸೆಗಳನ್ನು ಮಾಡಿದರೂ, ದೇವಾಲಯಗಳನ್ನೂ ಪುಸ್ತಕಭಂಡಾರಗಳನ್ನೂ ವಿಶ್ವವಿದ್ಯಾನಿಲಯಗಳನ್ನೂ ನಾಶ ಮಾಡುತ್ತಾ, ಅನೇಕರನ್ನು ಮತಾಂತರಿಸುತ್ತಾ ಹತ್ತು ಶತಮಾನಗಳ ಕಾಲ ರಾಜ್ಯ ಭಾರ ಮಾಡಿದರೂ ಕೂಡ ಸನಾತನಧರ್ಮವು ಇಂದಿಗೂ ಉಳಿಯುವಂತಾಯಿತು. ದೇವಾಲಯಗಳು ನಾಶವಾದಲ್ಲಿ ಬೇರೆಬೇರೆ ದೇವಾಲಯಗಳನ್ನು ಕಟ್ಟಿದರು ; ಪುಸ್ತಕಭಂಡಾರಗಳು ನಾಶವಾದಲ್ಲಿ ತಮ್ಮ ಜ್ಞಾಪಕಶಕ್ತಿಯಿಂದ ಬೇರೆ ಪ್ರತಿಗಳನ್ನು ಬರೆದರು ; ವಿಶ್ವವಿದ್ಯಾನಿಲಯಗಳನ್ನು ಪುನಃ ಸ್ಥಾಪಿಸಿದರು.

[ಮುಂದುವರಿಯುವುದು ಎ. ಸ. ಅಯ್ಯಂಗಾರ್, ಹೊಂಗನೂರು

ಗೋರಕ್ಷಣೆ ಪ್ರಾಣದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

SHAKTI SUDHA

Superb Tonic

ವುಡ್‌ಲಾಂಡ್ 28-8-64 ರಿಂದ
ಶಿಸು ಅಮೋಘ ಆರಂಭ
ಹೋಮಿ ವಾಡಿಯಾರವರ ಈಸ್ಟ್‌ಮೆನ್ ಕಲರಿನ
.... ಅದ್ಭುತ ಸನ್ನಿವೇಶಗಳಿಂದ ಕೂಡಿದ ಮನಮೋಹಕ ಹಿಂದಿ ಚಿತ್ರ ....
ಚಾರ್ ದರ್ವೇಶ್ Char Darvesh
ಭೂವಿಕೆಯಲ್ಲಿ — ಫಿರೋಜ್‌ಖಾನ್, ಸಯೀದಾ ಖಾನ್, ನಾಜ್
[ದಿನವಹಿ 3 ಪ್ರದರ್ಶನಗಳು]

ಆಪೆರಾ— 28-8-64 ರಿಂದ
ಅತ್ಯಮೋಘ ತೆಲುಗು ಚಿತ್ರ [ದಿನ 3 ಆಟಗಳು]
ಗುಡಿಗಂಟಲು
ತಾರಾಗಣ— ಎನ್ ಟಿ ರಾಮರಾವ್, ಕೃಷ್ಣಕುಮಾರಿ, ರೇಲಂಗಿ, ಗಿರಿಜ

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ



ಕನ್ನಡನಾಡಿನಲ್ಲಿ ಗೋರಕ್ಷಣೆ, ಪ್ರಾಣದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ.

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು.

ವಾರ್ಷಿಕ ಚಂದಾ 50 ನ ಪೈ
ಅಭಿಮಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)
ವಿಳಾಸ- ಗೋರಕ್ಷಣ ಆಫೀಸು ಚಾಮರಪುರಂ, ಮೈಸೂರು 4

*

: ಗೋರಕ್ಷಣ

ಚಂದಾ ವಾಯಿದೆ ಮುಗಿದಿರುವವರು ದಯವಾಡಿ ನವೀಕರಣ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ನೆರವು ನೀಡಿ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದೂ ವಿನಂತಿ ; ಇವರ ಹೆಸರು ಆಗಾಗ್ಗೆ ಸೂಚಿಕೆಯಲ್ಲಿ ಪ್ರಕಟಿಸಲಾಗುವುದು.

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4